1992ರ ಉಪ ಬಂಧಗಳು ಹಾಗೂ ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸುವ ಮಾರ್ಗಸೂಚಿಗಳನ್ವಯ ಕ್ರಮವಹಿಸಲಾಗುತ್ತಿದೆ. ಇತ್ತೀಚೆಗೆ ದಿನಾಂಕ: 27–08–2014ರಂದು ಹೊರಡಿಸಲಾದ ತಿದ್ದುಪಡಿ ಆದೇಶದಲ್ಲಿ ನ್ಯಾಯಬೆಲೆ ಅಂಗಡಿಗಳನ್ನು ಸಹಕಾರ ಸಂಘಗಳಿಗೆ ಹಾಗೂ ಸ್ತ್ರೀ ಶಕ್ತಿ ಮತ್ತು ಸ್ವ–ಸಹಾಯ ಸಂಘಗಳಿಗೆ ನೀಡಲು ಅವಕಾಶವನ್ನು ಕಲ್ಪಿಸಲಾಗಿದೆ.

ಆ) ಹೌದು, ಮೇಲಿನಂತೆ ಜಿಲ್ಲಾಧಿಕಾರಿಗಳಿಗೆ ಅವಶ್ಯಕತೆಗೆ ಅನುಗುಣವಾಗಿ ನ್ಯಾಯಬೆಲೆ ಅಂಗಡಿ ತೆರೆಯಲು ಅಧಿಕಾರ ನೀಡಲಾಗಿದೆ.

ಇ) ಅವಶ್ಯಕತೆಗೆ ಅನುಗುಣವಾಗಿ ಆಯಾ ಜಿಲ್ಲಾಧಿಕಾರಿಗಳು ನ್ಯಾಯಬೆಲೆ ಅಂಗಡಿಯನ್ನು ತೆರೆಯಲು ಕ್ರಮವಹಿಸುವರು.

ಗ್ರಾಮಾಂತರ ಭಾಗಕ್ಕೆ ನೂತನ ಬಸ್‌ಗಳು

407(1057) ಶ್ರೀ ಅರವಿಂದ ಲಿಂಬಾವಳಿ

ಅ) ಗ್ರಾಮಾಂತರ ಭಾಗದಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ ಬಸ್ಸ್‌ಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಸದರಿ ಗ್ರಾಮಗಳಿಗೆ ಯಾವಾಗ ಸಮರ್ಪಕ ಸಂಚಾರಿ ಸೇವೆಯನ್ನು ಕಲ್ಪಿಸಲಾಗುವುದು;

ಇ) ಹೊಸ ಮಾರ್ಗಗಳನ್ನು ಆಚರಣೆ ತರಲು ಕೈಗೊಂಡಿರುವ ಕ್ರಮಗಳೇನು?

ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಸಚಿವರು)

ಅ) ಬೆಂ.ಮ.ಸಾ.ಸಂಸ್ಥೆಯ ಆಚರಣಾ ವ್ಯಾಪ್ತಿಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಿಂದ 25 ಕಿ.ಮೀ. ವರೆಗೆ ವಿಸ್ತರಿಸಲಾಗಿರುತ್ತದೆ. 25 ಕಿ.ಮೀ ವ್ಯಾಪ್ತಿಯೊಳಗೆ ಬರುವ ಗ್ರಾಮಗಳ

ರಸ್ತೆಗಳು ಭಾರಿ ವಾಹನಗಳ ಓಡಾಟಕ್ಕೆ ಸೂಕ್ತವಾಗಿರುವ ಎಲ್ಲಾ ಗ್ರಾಮಗಳಿಗೆ ಸಾರಿಗೆ ಸೌಲಭ್ಯವನ್ನು ಒದಗಿಸಲಾಗಿರುತ್ತದೆ.

ಪ್ರಸ್ತುತ ಬೆಂ.ಮ.ಸಾ. ಸಂಸ್ಥೆಯ ವತಿಯಿಂದ ನಗರ ಪ್ರದೇಶಗಳಿಗೆ 1226 ಅನುಸೂಚಿಗಳಿಂದ 19,324 ಸುತ್ತುವಳಿಗಳನ್ನು ಹಾಗೂ ನಗರ ಹೊರವಲಯ ಪ್ರದೇಶಗಳಿಗೆ 5033 ಅನುಸೂಚಿಗಳಿಂದ 57.577 ಸುತ್ತುವಳಿಗಳನ್ನು ಕಾರ್ಯಾಚರಣೆಗೊಳಿಸಲಾಗುತ್ತಿದ್ದು, ಹಾಲಿಯಿರುವ ಅನುಸೂಚಿಗಳು ಬೇಡಿಕೆಗನುಗುಣವಾಗಿರುತ್ತವೆ.

ಆ) ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಜನಪ್ರತಿನಿಧಿಗಳು, ಸಂಘಸಂಸ್ಥೆಗಳು ಹಾಗೂ ಸಾರ್ವಜನಿಕರಿಂದ ಸಾರಿಗೆ ಸೌಲಭ್ಯ ಒದಗಿಸುವಂತೆ ಕೋರಿ ಬಂದಿರುವ ಮನವಿಗಳಿಗೆ ಸ್ಪಂದಿಸಿ, ಸಾರಿಗೆ ಸೌಲಭ್ಯ ಕೋರಿರುವ ಗ್ರಾಮಗಳು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಆಚರಣಾ ವ್ಯಾಪ್ತಿಯಲ್ಲಿದ್ದು, ಆ ಗ್ರಾಮದ ರಸ್ತೆಯು ಭಾರಿ ವಾಹನಗಳ ಓಡಾಟಕ್ಕೆ ಸೂಕ್ತವಾಗಿದ್ದಂತಹ ಎಲ್ಲಾ ಗ್ರಾಮಗಳಿಗೆ ಸಾರಿಗೆ ಸೌಲಭ್ಯವನ್ನು ಒದಗಿಸಲಾಗಿದೆ.

ಇ) ಹೊಸ ಮಾರ್ಗಗಳನ್ನು ಒದಗಿಸುವಂತೆ ಕೋರಿಕೆಗಳು ಬಂದಲ್ಲಿ, ಸಾರಿಗೆ ಸೌಲಭ್ಯ ಕೋರಿರುವ ಗ್ರಾಮಗಳು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಆಚರಣಾ ವ್ಯಾಪ್ತಿಯಲ್ಲಿದ್ದು, ಮನವಿದಾರರು ಕೋರಿರುವ ಗ್ರಾಮದ ರಸ್ತೆಯು ಭಾರಿ ವಾಹನಗಳ ಓಡಾಟಕ್ಕೆ ಸೂಕ್ತವಾಗಿದ್ದ ಪಕ್ಷದಲ್ಲಿ ಆ ಗ್ರಾಮಕ್ಕೆ ಸಾರಿಗೆ ಸೌಲಭ್ಯವನ್ನು ಒದಗಿಸುವ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.